## ಪದವಿಪೂರ್ವ ರೇಷ್ಮೆ ಕೃಷಿ ಡಿಪ್ಲೋಮಾ ಪಾಸಾದ ವಿದ್ಯಾರ್ಥಿಗಳಿಗೆ ಬಿ. ಎ. ಬಿ. ಎಂ. ಭಾಗ 1 ಕ್ಕೆ ಪ್ರವೇಶ ಕೊಡುವುದು

೮೭೮. ಶ್ರೀ ಬಾಗಲಕೋಟೆ (ಜಮಖಂಡಿ).—ಮಾನ್ಯ ಶಿಕ್ಷಣ ಸಚಿವರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ. ಕರ್ನಾಟಕ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಟ್ಟ ಕರ್ನಾಟಕ ಸರ್ಕಾರದ ವೃತ್ತಿ ಶಿಕ್ಷಣ ಇಲಾಖೆ ನಡೆಸುವ ಎರಡು ವರ್ಷ ಪದವಿ ಪೂರ್ವ ರೇಷ್ಮೆ ಕೃಷಿ ಡಿಪ್ಲೋಮಾ ಪಾಸಾದ ವಿದ್ಯಾರ್ಥಿಗಳಿಗೆ ಬಿ. ಎ. ಬಿ. ಎಂ. ಭಾಗ–೧ ಕ್ಕೆ ಪ್ರವೇಶ ಕೊಡಲಾಗಿದೆಯೆ ?

ಆ. ಹಾಗಿಲ್ಲದಿದ್ದಲ್ಲಿ ರಾಜ್ಯದ ಇನ್ನುಳಿದ ವಿಶ್ವ ವಿದ್ಯಾನಿಲಯಗಳಲ್ಲಿ ಈ ರೀತಿ ಪ್ರವೇಶ ಕೊಡಲಾಗಿದೆಯೆ ?

ಇ. ಹಾಗಿದ್ದಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ವಿದ್ಯಾರ್ಥಿಗಳಿಗೆ ಮಾತ್ರ ಈ ತಾರತಮ್ಯವೇಕೆ ? ಕಾರಣವೇನು ?

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—

ಈ ಕೆಳ ಕಂಡ ವಿಶ್ವವಿದ್ಯಾ ನಿಲಯಗಳಿಗೆ ಪ್ರವೇಶ ಕೊಡಲಾಗುತ್ತಿದೆ.

೧. ಕರ್ನಾಟಕ ವಿಶ್ವವಿದ್ಯಾನಿಲಯ

೨. ಮೈಸೂರು ವಿಶ್ವವಿದ್ಯಾನಿಲಯ

೩. ಗುಲ್ಬರ್ಗಾ ವಿಶ್ವವಿದ್ಯಾನಿಲಯ

೪. ಬೆಂಗಳೂರು ವಿಶ್ವವಿದ್ಯಾನಿಲಯ

ಈಗ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಪ್ರವೇಶ ಕೊಡಲಾಗುತ್ತಿಲ್ಲ. ಈ ವಿಷಯವನ್ನು ಅಂತರ ವಿಶ್ವವಿದ್ಯಾನಿಲಯಗಳ ಮಂಡಲಿಯ ಸಭೆಯಲ್ಲಿ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದನ್ನು

ಶ್ರೀ ಜೆ. ಎಸ್. ಬಾಗಲಕೋಟೆ.—ಸ್ವಾಮಿ ಕರ್ನಾಟಕ ವಿಶ್ವ ವಿದ್ಯಾನಿಲಯದ ವ್ಯಾಪ್ತಿಗೆ ಒಳಪಟ್ಟ ಕರ್ನಾಟಕ ಸರ್ಕಾರದ ವೃತ್ತಿ ಶಿಕ್ಷಣ ಇಲಾಖೆ ನಡೆಸುವ ಎರಡು ವರ್ಷದ ಪದವಿ ಪೂರ್ವ ರೇಷ್ಮೆ ಕೃಷಿ ಡಿಪ್ಲೊಮಾ ಪಾಸಾದ ವಿದ್ಯಾರ್ಥಿ ಬಿ. ಎ. ಬಿ. ಎಂ. ಭಾಗ ೧ ಕ್ಕೆ ಸೇರುವುದಕ್ಕೆ ನಮ್ಮ ಭಾಗದ ವಿದ್ಯಾರ್ಥಿಗಳಿಗೆ ಅನುಮತಿ ಕೊಡುತ್ತಾ ಇಲ್ಲ ಎನ್ನುವ ಪತ್ರಗಳ ವಿದ್ಯಾರ್ಥಿಗಳಿಂದ ಬಂದಿರುವುದರಿಂದ ದಯವಿಟ್ಟು ಆ ವಿದ್ಯಾರ್ಥಿಗಳಿಗೆ ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಸೇರುವ ಹಾಗೆ ಅವಕಾಶ ಮಾಡಿ ಕೊಡುತ್ತೀರಾ ?

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಆ ವಿದ್ಯಾರ್ಥಿಗಳಿಂದ ಬಂದಂಥ ಪತ್ರಗಳನ್ನು ನನಗೆ ಕಳಂಹಿಸಿ ಕೊಡಲಿ, ಆದರಲ್ಲಿ ನ್ಯೂನತೆ ಏನಾದರೂ ಇದ್ದರೆ ಸರಿಪಡಿಸುತ್ತೇನೆ.

## ಗುಲ್ಬರ್ಗ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯೋಜನೆಗಳ ಮೇಲ್ವಿಚಾರಣೆ.

೫೪೫. ಶ್ರೀ ಮಾಲಿಕಯ್ಯ ಗುತ್ತೇದಾರ್ (ಆಫಜಲ್‌ಪುರ್).—

ಅ. ಗುಲ್ಬರ್ಗಾ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯೋಜನೆಗಳ ಉಸ್ತುವಾರಿ ನೋಡಿಕೊಳ್ಳಲು ತೆರೆಯಲಾದ ಸಾರ್ವಜನಿಕ ಇಂಜನಿಯರಿಂಗ್ ಉಪ ವಿಭಾಗಗಳ ಸಂಖ್ಯೆ ಎಷ್ಟು ?

ಆ. ಕುಡಿಯಂಪ ನೀರಿನ ಯೋಜನೆಗಳ ಮತ್ತು ಕೊಳವೆ ಬಾವಿಗಳ ದುರಸ್ತಿ ಮೇಲ್ವಿಚಾರಣೆಗೆ ಇರುವ ಸಿಬ್ಬಂದಿಯ ಸಂಖ್ಯೆ ಎಷ್ಟು ?

ಇ. ಈ ಯೋಜನೆಗಳಿಗನ್ವಯ ಸಿಬ್ಬಂದಿ ಕೊರತೆ ಇದೆ ಎನ್ನುವುದು, ಸರ್ಕಾರದ ಗಮನಕ್ಕೆ ಬಂದಿದೆಯೆ ?

ಈ. ಹಾಗಿದ್ದಲ್ಲಿ ಹೆಚ್ಚಿನ ಸಿಬ್ಬಂದಿ ಮತ್ತು ಹೊಸ ವಿಭಾಗಗಳನ್ನು ಪ್ರಾರಂಭಿಸಲು ಸರ್ಕಾರದವರು ಯೋಚಿಸಿದ್ದಾರೆಯೆ ?